ಪ್ಲಾನ್ ಮತ್ತು ಎಸ್ಟಿಮೇಟ್ ಅನ್ನು ಮಾಡುವುದಕ್ಕೆ ಮತ್ತು ಈ ಬಗ್ಗೆ ಸಂಶೋಧನೆ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಬಿಜಾಪುರ ಜಿಲ್ಲೆಯ ಹೊನವಾಡಿಯಲ್ಲೂ ಡೆಪ್ಯೂಟಿ ಡೈರಕ್ಟ್ ಆಫ್ ಅಗ್ರಿಕಲ್‌ಚರ್ ಆಫೀಸಿನ ಒಂದು ಬ್ರಾಂಚ್ ಇರುವುದರಿಂದ ಅಲ್ಲಿಗೂ ಒಂದು ಸಾಯಿಲ್ ಕನ್‌ಸರ್ವೇಷನ್ ಆಫೀಸರನ್ನು ಏತಕ್ಕೆ ಮಂಜೂರು ಮಾಡಬಾರದು ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಬಿಜಾಪುರ ಜಿಲ್ಲೆಗೂ ಸಹ ಪ್ರತಿಯೊಂದು ತಾಲ್ಲೂಕಿಗೂ ಈ ಬಗ್ಗೆ ಎಸ್ಟಿಮೇಟ್ ಮತ್ತು ಪ್ಲಾನ್ ತಯಾರು ಮಾಡಿ ಎಂದು ಹೇಳಿದೆ. ಬಾಗಲ್‌ಕೋಟೆಗೂ ಸಹ ಹೇಳಿದೆ.

ಶ್ರೀ ವಿ. ವಿ. ಪತ್ತಾರ್.—ಮಾನ್ಯ ಅಧ್ಯಕ್ಷರೇ, ಈ ಸ್ಕೀಮ್‌ನ್ನು ಎನ್.ಆರ್.ಇ.ಪಿ.ಯಲ್ಲಿ ತೆಗೆದುಕೊಳ್ಳುವುದು ಒಳ್ಳೆಯದು. ಆದರೆ ಇದನ್ನು ಅದರಲ್ಲಿ ತೆಗೆದುಕೊಳ್ಳುವುದಕ್ಕೆ ಒಂದು ವಿಧದಲ್ಲಿ ಮಾತ್ರ ತೊಂದರೆ ಬರುತ್ತದೆ. ಏನೆಂದರೆ ನಮ್ಮಲ್ಲಿ ಈ ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಪ್ರತಿದಿನ ೧೦ ರೂಪಾಯಿಗಳ ಡೈಲಿ ವೇಜಸ್ ಕೊಡುತ್ತಾರೆ. ಈ ಎನ್.ಆರ್.ಇ.ಪಿ.ಯಲ್ಲಿ ೫ ರೂ.ಗಳನ್ನು ಕೊಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಈ ಎನ್.ಆರ್.ಇ.ಪಿ.ಯಲ್ಲಿ ಏನೊಂದು ಕೆಲಸ ಕಾರ್ಯಗಳು ನಡೆಯುತ್ತಿವೆ ಅದರಲ್ಲಿ ಅವರಿಗೆ ಆ ವೇಜಸ್ ಕೊಡುವ ಮುಂಚೆ ವೇಜಸ್‌ನಲ್ಲಿ ಪರಿಷ್ಕರಣ ಮಾಡಿ ಕೊಟ್ಟರೆ ಅವರು ಇನ್ನೂ ಒಳ್ಳೆ ಉತ್ತಮವಾಗಿ ಕೆಲಸ ಮಾಡುತ್ತಾರೆ. ಆ ರೀತಿ ಮಾಡಬೇಕು ಎಂದು ಹೇಳಬಯಸುತ್ತೇನೆ. ಇನ್ನು ಮಾನ್ಯ ಎಂ. ವೈ. ಪಾಟೀಲರು ಆಗಲೇ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತಂದರು. ಅವರು ಹೇಳಿದ ಹಾಗೆ ಸುಮಾರು ೭೦–೭೫ ಸಾವಿರ ಎಕರೆ ಭೂಮಿಯಲ್ಲಿ ಕೆಲಸ ಮಾಡತಕ್ಕಂಥ ಒಕ್ಕಲಿಗರು ಯಾರಿದ್ದಾರೆ ಅವರಿಗೆ ವಾಟರ್‌ರೇಟ್ ಟ್ಯಾಕ್ಸ್‌ನಲ್ಲಿ ರಿಯಾಯಿತಿ ತೋರಿಸಿಲ್ಲ. ಅಲ್ಲಿರತಕ್ಕಂಥ ಜಾಲು ನೆಲದಲ್ಲಿ ಬೆಳೆ ಸರಿಯಾಗಿ ಆಗುತ್ತಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಮಂತ್ರಿಯವರು ಈ ವಾಟರ್‌ರೇಟ್ ಟ್ಯಾಕ್ಸನ್ನು ಎಗ್ಸೆಂಪ್ಟ್ ಮಾಡುವ ಬಗ್ಗೆ ಯೋಚನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಈ ಬಗ್ಗೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲಿ ಅಂತಹ ಪರಿಸ್ಥಿತಿ ಇದ್ದರೆ ಅದನ್ನು ನಿರ್ದಿಷ್ಟವಾಗಿ ಸರ್ಕಾರದ ಗಮನಕ್ಕೆ ತಂದರೆ ಅದನ್ನು ನಾನು ಎಗ್ಸಾಮಿನ್ ಮಾಡಿಸುತ್ತೇನೆ.

ಶ್ರೀ ವಿ. ಬಿ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಈ ಬಗ್ಗೆ ರೀ ಎಸ್ಟಿಮೇಟ್ ಮಾಡಿದರೆ, ಅಂತಹ ಒಳ್ಳೆಯ ಕೆಲಸಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಬಹುದು. ಮತ್ತು ಅದರಿಂದ ಹೆಚ್ಚಿನ ಲಾಭವನ್ನೂ ನಿರೀಕ್ಷಿಸಬಹುದು. ಆದ್ದರಿಂದ ಈ ವಿಚಾರದಲ್ಲಿ ಎಷ್ಟೇ ಖರ್ಚು ಬಂದರೂ ಹಿಂಜರಿಯದೇ ಈ ಕೆಲಸವನ್ನು ತ್ವರಿತವಾಗಿ ತೆಗೆದುಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ. ಮತ್ತು ಈ ಬಗ್ಗೆ ಮಾನ್ಯ ಮಂತ್ರಿಯವರು ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈ ಬಗ್ಗೆ ನಾವು ತೀವ್ರವಾಗಿ ಯೋಚನೆ ಮಾಡುತ್ತೇವೆ.

Sonna Village Irrigation Scheme under VI Five Year Plan.

278. SRI M. Y. PATIL (Afzalpur).—Will the Minister of State for Major and Medium Irrigation be pleased to state.—

(*a*) whether the Government will take up this year the Sonna Village Irrigation Scheme of Bheema river to provide irrigation facilities to the drought affected Afzalpur taluk ;

(*b*) whether it has come to the notice of the Government that it will be the first scheme in Karnataka on the bank of Bheema river if the scheme is implemented ?

SRI B. B CHIMMANAKATTI (Minister of State for Major and Medium Irrigation).—

(*a*) This Scheme will not be taken up during the current year itself though it has been included in the Sixth five Year Plan.

(*b*) Yes.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಅಫ್‌ಜಲ್‌ಪುರ್ ತಾಲ್ಲೂಕಿನಲ್ಲಿ ಈ ಭೀಮಾನದಿಯ ಸೊನ್ನ ವಿಲೇಜ್ ಇರಿಗೇಷನ್ ಸ್ಕೀಮ್‌ನ್ನು ತೆಗೆದು ಕೊಳ್ಳಲು ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಭೀಮಾ ನದಿಗೆ ಸಂಬಂಧಪಟ್ಟಹಾಗೆ ಯಾವ ಒಂದು ನೀರಾವರಿ ಯೋಜನೆಯೂ ಇಲ್ಲಿಯವರೆಗೆ ಪ್ರಾರಂಭವಾಗಲಿಲ್ಲ. ಇದರಿಂದಾಗಿ ನಮಗೆ ಕುಡಿಯುವುದಕ್ಕೆ ನೀರು ಸಿಕ್ಕುತ್ತಾ ಇಲ್ಲ. ಈ ನೀರಿನ ಲಾಭವನ್ನು ಮಹಾರಾಷ್ಟ್ರದವರು ಪಡೆದುಕೊಳ್ಳುತ್ತಿದ್ದಾರೆ. ಈ ಯೋಜನೆ ಏನಿದೆ ಇದನ್ನು ನಮ್ಮ ಕರ್ನಾಟಕ ಸರ್ಕಾರದವರು ಈ ವರ್ಷವಾದರೂ ಸ್ವಲ್ಪವಾದರೂ ಹಣವನ್ನು ಖರ್ಚು ಮಾಡಿ ಕಾರ್ಯಗತ ಮಾಡುತ್ತಾರೆಯೇ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಭೀಮಾ ನದಿಯ ಲಿಫ್ಟ್ ಇರಿಗೇಷನ್ ಸ್ಕೀಮ್‌ಗೆ ಸಂಬಂಧಪಟ್ಟಹಾಗೆ ಕೇಳುತ್ತಿದ್ದಾರೆ. ನಾವು ಈಗಾಗಲೇ ೧೯೮೧ರ ಡಿಸೆಂಬರ್ ತಿಂಗಳಿನಲ್ಲಿ ಈ ಬಗ್ಗೆ ವಿವರಗಳನ್ನು ಸೆಂಟ್ರಲ್ ಕಮಿಷನ್‌ಗೆ ಕಳಿಸಿಕೊಟ್ಟಿದ್ದೇವೆ. ಆದಕ್ಕೆ ಸೆಂಟ್ರಲ್ ವಾಟರ್ ಕಮಿಷನ್‌ನಿಂದ ಕ್ಲಿಯರೆನ್ಸ್ ಸಿಕ್ಕಿದನಂತರ ಈ ಒಂದು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಾ ಇದೆ.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಇದನ್ನು ಸೆಂಟ್ರಲ್ ವಾಟರ್ ಕಮಿಷನ್‌ಗೆ ಕಳಿಸಿದ್ದಾರೆಂದು ಹೇಳುತ್ತಿದ್ದಾರೆ. ಇದಕ್ಕೆ ಅವರಿಂದ ಕ್ಲಿಯರೆನ್ಸ್ ದೊರಕುವುದಕ್ಕೆ ಪೂರ್ವದಲ್ಲಿ ನಮ್ಮ ಕರ್ನಾಟಕ ರಾಜ್ಯ ಸರ್ಕಾರದವರು ಈ ಯೋಜನೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಹಿಂದೆ ಕೂಡ ಈ ಅಪ್ಪರ್ ಕೃಷ್ಣಾ ಯೋಜನೆಗೆ ಸಂಬಂಧಪಟ್ಟಹಾಗೆ ಅವರಿಂದ ಮಂಜೂರಾತಿ ಪಡೆಯದೇ ನಮ್ಮ ಸರ್ಕಾರದವರು ಮೊದಲು ಅದರ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿ ಆಮೇಲೆ ಸೆಂಟ್ರಲ್ ವಾಟರ್ ಕಮಿಷನ್‌ನಿಂದ ಪರ್ಮಿಷನ್ ತೆಗೆದುಕೊಂಡಿದ್ದಾರೆ. ಅದೇ ರೀತಿಯಲ್ಲಿ ಈ ಭೀಮಾನದಿಗೆ ಸಂಬಂಧಪಟ್ಟ ಈ ನೀರಾವರಿ ಯೋಜನೆಯ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿ ಆಮೇಲೆ ಈ ಸೆಂಟ್ರಲ್ ವಾಟರ್ ಕಮಿಷನ್‌ನಿಂದ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಈಗ ನಾವು ಯಾವುದೇ ಹೊಸ ಯೋಜನೆಗಳನ್ನು ಮತ್ತು ಅದರ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬಾರದು ಎನ್ನುತಕ್ಕಂಥ ವಿಚಾರ ನಮ್ಮ ಸರ್ಕಾರದ ಮುಂದೆ ಇದೆ. ಈಗ ನಡೆಯುತ್ತಾ ಇರತಕ್ಕಂಥ ಪ್ರಾಜೆಕ್ಟ್ ಕೆಲಸಗಳು ನಮ್ಮ ಕೈಯಲ್ಲಿ ಸಾಕಷ್ಟು ಇರುವುದರಿಂದ ಆಧ್ಯತೆಯ ಮೇರೆಗೆ ಅದೆಲ್ಲವನ್ನೂ ಮೊದಲು ಮುಗಿಸಬೇಕೆಂದು ಮಾನ್ಯ ಪ್ರಧಾನಮಂತ್ರಿಯವರು ನಮ್ಮ ರಾಜ್ಯ ಸರ್ಕಾರದವರಿಗೆ ಆದೇಶ ನೀಡಿದ್ದಾರೆ. ಮಾನ್ಯ ಸದಸ್ಯರ ಪ್ರದೇಶದಲ್ಲಿ ಬರತಕ್ಕಂಥ ಕೃಷ್ಣಾ ಮೇಲ್ದಂಡೆ ಯೋಜನೆಯ ಕೆಲಸ ಕಾರ್ಯಗಳಿಗೆ ನಾವು ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದೇವೆ. ಇದರ ಕೆಲಸ ಕಾರ್ಯಗಳು ಬೇಗ ಮುಗಿದರೆ ಈ ಹೊಸ ಯೋಜನೆಗಳನ್ನು ತೆಗೆದುಕೊಂಡು ಮಾಡುವುದಕ್ಕೆ ಸುಲಭವಾಗುತ್ತದೆಂದು ಹೇಳುತ್ತಿದ್ದೇನೆ

Allotment of Industrial Sheds in Hassan Town

348 SRI K. H. HANUME GOWDA (Hassan).—Will the Minister for Food and Civil Supplies be pleased to state :—

(a) the number of applications received requesting for allotment of Industrial Sheds to start industries in Hassan town ;